ಅಸಲು ದಾವಾ ನಂ. 64/2019

ಪಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.09.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎ ಕೆ ಕೆ ವಕೀಲರಿಂದಃ

ದಾವಾ ಆಸ್ತಿಯು ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಸದರಿ ಜಮೀನು ಫಲವತ್ತಾದ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಹತ್ತಿರ ಕಾಲುವೆ ಬಂದಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ಕೆನಾಲ್ ಬಂದಿರುವುದಿಲ್ಲ ಆದರೆ ಕೋರವಾರ ಗ್ರಾಮಕ್ಕೆ ಬಂದಿರುತ್ತದೆಯೇ ಎಂದರೆ ಸಾಕ್ಷಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಕೋರವಾರ ಗ್ರಾಮಕ್ಕೆ ಕೆನಾಲ್ ಬಂದ ಕಾರಣ ಜಮೀನುಗಳಿಗೆ ನೀರನ್ನು ಹಾಯಿಸಲಾಗುತ್ತದೆ ಎಂದರೆ ಸಾಕ್ಷಿ ನೀರಾವರಿ ಆಗುತ್ತದೆ ಎಂದು ನುಡಿಯುತ್ತಾರೆ.

2008 ರಲ್ಲಿ ಕೋರವಾರ ಗ್ರಾಮದಲ್ಲಿದ್ದ ಎರಿ ಮಣ್ಣಿನ ಜಮೀನಿನ ಮೌಲ್ಯ ಪ್ರತಿ ಎಕರೆ 2 ರಿಂದ 3 ಲಕ್ಷ ರೂಪಾಯಿ ಇತ್ತು ಸಾಕ್ಷಿ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನು ಕಪ್ಪು ಮಣ್ಣು ಇದ್ದು ಅದು ಎರಿ ಜಮೀನು ಇರುತ್ತದೆ ಎಂದರೆ ಸರಿ.

2008 ರಲ್ಲಿ ಪ್ರತಿವಾದಿಗೆ 1 ಲಕ್ಷ ರೂಪಾಯಿ ಹಣದ ಅಡಚಣೆ ಬಂದಿತ್ತು ಎಂದರೆ ಸರಿ. ಆಗ ಪ್ರತಿವಾದಿ ನನಗೆ 1 ಲಕ್ಷ ರೂಪಾಯಿ ಹಣವನ್ನು ಕೈಗಡ ಸಾಲ ನೀಡುವಂತೆ ಕೇಳಿದ್ದರು ಎಂದರೆ ಸರಿ. ಸದರಿ ಕೈಗಡ ಸಾಲಕ್ಕೆ ಭದ್ರತೆಗಾಗಿ ಏನಾದರು ಬರೆದುಕೊಡುವಂತೆ ನಾನು ಕೇಳಿದ್ದೆ ಎಂದರೆ ಸಾಕ್ಷಿನಾನು ಹೊಲದ ವ್ಯವಹಾರ

ಮಾಡಿಕೊಂಡೆ 1 ಲಕ್ಷ ರೂಪಾಯಿ ಹಣ ನೀಡಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ನಿಪಿ 1 ರಂತೆ 1 ಲಕ್ಷ ರೂಪಾಯಿ ಕೈಗಡ ಹಣವನ್ನು ಮರಳಿಸಿದ್ದಲ್ಲಿ ಸದರಿ ದಾಖಲಾತಿಯನ್ನು ರದ್ದು ಮಾಡುವಂತೆ ಕರಾರು ಆಗಿತ್ತು ಎಂದರೆ ಸರಿಯಲ್ಲ. ನನ್ನ ಹತ್ತಿರ ಲಕ್ಷಾಂತರ ಹಣ ಇರುತ್ತವೆ ಎಂದರೆ ಸಾಕ್ಷಿ ಇರುತ್ತವೆ ಎಂದು ನುಡಿಯುತ್ತಾರೆ.

ನಿಪಿ 1 ಖರೀದಿ ಕರಾರು ಪತ್ರ ಇರುವುದಿಲ್ಲ ಪ್ರತಿವಾದಿ ನನ್ನ ಕಡೆಯಿಂದ ಪಡೆದ ಹಣಕ್ಕೆ ಬರೆದುಕೊಟ್ಟ ಭದ್ರತೆಯ ದಾಖಲಾತಿ ಆಗಿತ್ತು ಎಂದರೆ ಸರಿಯಲ್ಲ. ಹಾಗಾಗಿ ನನ್ನ ಹತ್ತಿರ ಸಾಕಷ್ಟು ಇದ್ದರೂ ಸಹ ನಾನು ನಿಪಿ 1 ರಂತೆ ಜಮೀನನ್ನು ಖರೀದಿ ಹಾಕಿಕೊಂಡಿಲ್ಲ ಎಂದರೆ ನಾನು ಸಾಕಷ್ಟು ಬಾರಿ ಕೇಳಿದ್ದೆ ಆದರೆ ಪ್ರತಿವಾದಿ ಜಮೀನನ್ನು ಕ್ರಯ ಪತ್ರ ಮಾಡಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

2008-09 ನೇ ಸಾಲಿನಲ್ಲಿ ನಾನು ಪ್ರತಿವಾದಿಗೆ ನಿಪಿ 1 ರಂತೆ ದಾವಾ ಜಮೀನನ್ನು ಖರೀದಿ ಮಾಡಿ ಕೊಡುವಂತೆ ವಕೀಲರ ಮೂಲಕ ಏನಾದರು ನೋಟಿಸ್ ಕಳುಹಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನು ಪ್ರತಿವಾದಿಯ ಕುಟುಂಬಕ್ಕೆ ಇರುವ ಒಂದೇ ಆದಾಯದ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಜಮೀನನ್ನು ತಾನೊಬ್ಬನೇ ಮಾರಾಟ ಮಾಡುವ ಹಕ್ಕು ಇರಲಿಲ್ಲ ಆತನ ಮಕ್ಕಳಿಗೂ ಸಹ ಪಾಲು ಇತ್ತು ಎಂದರೆ ಸಾಕ್ಷಿ ನಾನು ಖರೀದಿ ಕರಾರು ಪತ್ರ ಮಾಡಿಕೊಳ್ಳುವಾಗ ಉತಾರೆಯಲ್ಲಿ ಪ್ರತಿವಾದಿಯ ಹೆಸರು ಮಾತ್ರ ಇತ್ತು ಎಂದು ನುಡಿಯುತ್ತಾರೆ.

ಪ್ರತಿವಾದಿಗೆ ಜಮೀನು ಪಿತ್ರಾರ್ಜಿತವಾಗಿ ಬಂದಿದ್ದರ ಬಗ್ಗೆ ಏನಾದರು ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುವುದಿಲ್ಲ ಆದರೆ ಪಹಣಿ ಪತ್ರಿಕೆ ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ಕ್ಕೆ ಪ್ರತಿವಾದಿಯ ಹೆಂಡತಿ ಮಕ್ಕಳ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಇಲ್ಲ. ಅವರ ಹೆಂಡತಿ ತೀರಿಕೊಂಡಿದ್ದು ಮಕ್ಕಳು ಚಿಕ್ಕವರು ಇದ್ದರು ಎಂದು ನುಡಿಯುತ್ತಾರೆ.

ಪ್ರತಿವಾದಿಯು ತಾನು ಪಡೆದ 1 ಲಕ್ಷ ರೂಪಾಯಿ ಹಣವನ್ನು ಕೊಡುತ್ತೇನೆ ಎಂದು ಹೇಳಿ ನಿಪಿ 1 ರದ್ದು ಮಾಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನಾನು ನಿಪಿ 1 ನ್ನು ಇಂದು ನಾಳೆ ರದ್ದು ಮಾಡುತ್ತೇನೆ ಎಂದು ಮುಂದುಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಬರೆದುಕೊಂಡ ದಾಖಲಾತಿಯನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನನ್ನೊಂದಿಗೆ ಪ್ರತಿವಾದಿ ಯಾವುದೇ ಖರೀದಿ ವ್ಯಹಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಾನು ಕೈಗಡ ಪಡೆದುಕೊಂಡು 1 ಲಕ್ಷ ರೂಪಾಯಿಗೆ ನಿಪಿ 1 ತೋರಿಕೆ ಮಾಡಿಕೊಟ್ಟ ಖರೀದಿ ಕರಾರು ಪತ್ರ ಇರುತ್ತದೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಯು 1 ಲಕ್ಷ ರೂಪಾಯಿ ಹಣವನ್ನು ವಾಪಸ್ ನೀಡಲು ತಯಾರಿರುತ್ತಾರೆ ಎಂದರೆ ಸಾಕ್ಷಿ ನನಗೆ ಹಣ ಬೇಕಾಗಿಲ್ಲ ಕ್ರಯ ಪತ್ರ ಮಾಡಿಕೊಡಬೇಕು ಎಂದು ಹೇಳುತ್ತಾರೆ. ಪ್ರತಿವಾದಿಯ ಕುಟುಂಬಕ್ಕೆ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.